ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 06.07.2023.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ</u>**

1 ನೇ ಪ್ರತಿವಾದಿ ಮತ್ತು ನಿಡಿ-2 ರಲ್ಲಿಯ ಸಾಕ್ಷಿದಾರರು ನನಗೆ ಮೊದಲಿನಿಂದಲೂ ಪರಿಚಯ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹೆಸರುಗಳು ನಿಡಿ-2 ರಲ್ಲಿ ಬರೆದಿರುತ್ತವೆ ಆ ಕಾರಣ ಅವರ ಹೆಸರುಗಳನ್ನು ನಾನು ಹೇಳಿರುತ್ತೇನೆ. ನಿಡಿ-2 ನ್ನು ತಯಾರಿಸುಕ್ಕಿಂತ ಮುಂಚೆ ಕೊಟ್ಟ ಮಾಹಿತಿಯನ್ನು ಟಿಪ್ಪಣಿ ಮಾಡಿಕೊಂಡಿರುತ್ತೇನೆ, ಆದರೆ ಸದರಿ ಟಿಪ್ಪಣಿ ನನ್ನ ಹತ್ತಿರ ಇರುವುದಿಲ್ಲ. ನಿಡಿ-2 ರ ಡ್ರಾಫ್ಟ್ ನ್ನು ಕೈಯಲ್ಲಿ ಬರೆದುಕೊಂಡು ಅದನ್ನು ಗಣಿಕಿಕೃತವಾಗಿ ಬೆರಳಚ್ಚು ಮಾಡಿಸಿ ಎಂದು ನಾನು ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ಯಾರಿಗೆ ಬೆರಳಚ್ಚು ಮಾಡಿಸಲು ಕೊಟ್ಟೆ ಎಂದು ನನಗೆ ನೆನಪು ಇಲ್ಲಾ. ತದನಂತರ ಬೆರಳಚ್ಚು ಮಾಡಿಸಿದ ದಾಖಲೆಯನ್ನು ನಿಡಿ-2 ನ್ನು ನನ್ನ ಹತ್ತಿರ ತಂದಿರುತ್ತಾರೆ ನಾನು ಸಹಿ ಮಾಡಿಕೊಟ್ಟಿರುತ್ತೇನೆ. ನಿಡಿ-2 ರ ಮೇಲೆ ನಾನು ಸಹಿ

ಮಾಡುವಾಗ ಸಾಕ್ಷಿದಾರರಾಗಲಿ ಅಥವಾ ವಿಲ್ ಮಾಡುವವರ ಸಹಿ ಅದರ ಮೇಲೆ ಇರಲಿಲ್ಲ. ಸಾಕ್ಷಿ ಮುಂದುವರೆದು ನಾವೇ ನೋಂದಣಿ ಮಾಡಿಕೊಡುತ್ತೇವೆ ಎಂದು ಹೇಳಿದ್ದರಿಂದ ನಾನು ಸಹಿ ಮಾಡಿಕೊಟ್ಟಿರುತ್ತೇನೆ. ನಿಡಿ-2 ರ 2 ನೇ ಪುಟದಲ್ಲಿ ಚೆಕ್‌ಬಂದಿಯನ್ನು ಬರೆದ ಅಕ್ಷರಗಳು ನನ್ನವು ಅಲ್ಲಾ ಎಂದರೆ ಸರಿ. ನಿಡಿ-2 ರಲ್ಲಿ 2 ನೇ ಪುಟದಲ್ಲಿ ನಾನು ಸಹಿ ಮಾಡುವ ಕಾಲಕ್ಕೆ ತಿದ್ದುಪಡೆ ಇರಲಿಲ್ಲ ಎಂದರೆ ಸರಿ.

ನಾನು ನಿಡಿ-2 ರ ದಾಖಲೆಯನ್ನು ತಯಾರಿಸುವ ಕಾಲಕ್ಕೆ ಬರೆದುಕೊಟ್ಟ ಡ್ರಾಫ್ಟ್ ನ್ನು ಮರಳಿ ಪಾರ್ಟಿದಾರರಿಂದ ಪಡೆದಿಲ್ಲಾ. ನಿಡಿ-2 ರಲ್ಲಿ ಕಾಣಿಸಿದ ಪಕ್ಷಗಾರರ ಮತ್ತು ಸಾಕ್ಷಿದಾರರ ಗುರುತಿನ ಚೀಟಿಯ ನಂಬರ, ಆಧಾರ ಚೀಟಿಯ ನಂಬರ ಬರೆದಿಲ್ಲಾ, ಏಕೆಂದರೆ ಅವರು ನನಗೆ ಕೊಟ್ಟಿರುವುದಿಲ್ಲ. ನನಗೆ ನಿಡಿ-2 ರ ಪಕ್ಷಗಾರರು ಮತ್ತು ಸಾಕ್ಷಿದಾರರು ವ್ಯಯಕವಾಗಿ ಪರಿಚಯ ಇರದೇ ಇರುವ ಕಾರಣ ಅವರೇ 1 ನೇ ಪ್ರತಿವಾದಿ ಕೇಸುಬಾಯಿ ಮತ್ತು ಅವರ ಗಂಡ ನಾಮದೇವ ಇರುತ್ತಾರೆ ಎಂದು ನನಗೆ ಗುರುತಿಸಲು ಸಾಧ್ಯವಿಲ್ಲಾ ಎಂದರೆ ಸರಿ, ಏಕೆಂದರೆ ಅವರು ಗುರುತಿನ ಚೀಟಿ ನೀಡಿರಲಿಲ್ಲ ಎಂದು ನುಡಿಯುತ್ತಾರೆ.

ನಿಡಿ-2 ರ 7 ನೇ ಸಾಕ್ಷಿದಾರರಾದ ರಂಘುಬಾಯಿ ಎಂಬ ನಮೂದಿಸಿದ ಅಕ್ಷರ ನನ್ನ ಕೈಬರಹ ಅಲ್ಲಾ ಎಂದರೆ ಸರಿ. ನಿಡಿ-2 ರ ತಯಾರಿಸುವ ಕಾಲಕ್ಕೆ 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ರವರ ಆರೋಗ್ಯ ಮತ್ತು ಬುದ್ಧಿಶಕ್ತಿ ಸರಿಯಾಗಿತ್ತು ಎಂದು ತಿಳಿದುಕೊಳ್ಳಲು ನಾನು ಯಾವುದೇ ಪರೀಕ್ಷೆ ಮಾಡಿಲ್ಲಾ. 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ನಾಮದೇವ ರವರ ಕೊಟ್ಟ ಮಾಹಿತಿ ಮೇರೆಗೆ ನಿಡಿ-2 ನ್ನು ತಯಾರಿಸಿರುತ್ತೇನೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಅವರೇ 1 ನೇ ಪ್ರತಿವಾದಿ ಮತ್ತು ಆಕೆಯ ಗಂಡ ನಾಮದೇವ

ಎಂದು ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ, ಏಕೆಂದೆರ ಅವರು ನನಗೆ ಗುರುತಿನ ಚೀಟಿ ಕೊಟ್ಟಿರಲಿಲ್ಲ. ಸಾಕ್ಷಿ ಮುಂದುವರೆದು ತಾವೆ ಕೇಸುಬಾಯಿ ಮತ್ತು ನಾಮದೇವ ಇರುತ್ತೇವೆ ಎಂದು ಹೇಳಿದ್ದರಿಂದ ನಾನು ನಿಡಿ-2 ನ್ನು ತಯಾರಿಸಿರುತ್ತೇನೆ. 5 ನೇ ಪ್ರತಿವಾದಿ ನಿಡಿ-2 ನ್ನು ತಯಾರಿಸುವ ಕಾಲಕ್ಕೆ ಬಂದಿದ್ದರ ಬಗ್ಗೆ ನನಗೆ ನೆನಪು ಇರುವುದಿಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**